ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 27-33
©IIMRD, Mysuru

IIMRD JOURNALS

www.iimrd.com

# ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ದಿವಾನ್ ಶೇಷಾದ್ರಿ ಅಯ್ಯರ್ ಕೈಗೊಂಡ ಕ್ರಮಗಳು: ಒಂದು ಅಧ್ಯಯನ

**ದಾಸಪ್ರಕಾಶ್ ಆರ್.ಕೆ.**[1]

## ಪೀಠಿಕೆ

ಮೈಸೂರು ಸಂಸ್ಥಾನದ ಆಡಳಿತದಲ್ಲಿ ಕಮೀಷನರ ಆಡಳಿತವು 50 ವರ್ಷಗಳು ಮುಗಿದು ನಂತರ ಮೈಸೂರು ಸಂಸ್ಥಾನದ ರಾಜಮನೆತನಕ್ಕೆ ಅಧಿಕಾರವನ್ನು ಬ್ರಿಟಿಷರು ಬಿಟ್ಟುಕೊಟ್ಟರು. ಆ ಸಂದರ್ಭದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತು ಪುತ್ರ 10ನೇ ಚಾಮರಾಜ ಒಡೆಯರು 1881ರಲ್ಲಿ ಮೈಸೂರು ಸಂಸ್ಥಾನದಲ್ಲಿ ಅರಸರ ಅಧಿಕಾರದ ಪುನರ್ ಸ್ಥಾಪನೆಯಾಯಿತು. ಅವರಿಗೆ ಸಮರ್ಥರಾದ ಕೆ. ಶೇಷಾದ್ರಿ ಅಯ್ಯರ್ ಅಂತಹ ದಿವಾನರ ಸಹಾಯ ದೊರೆಯಿತು. 10ನೇ ಚಾಮರಾಜರು ಬಾಲಕರಾದ್ದರಿಂದ ಅವರ ಆಡಳಿತ ಸಹಾಯಕ್ಕಾಗಿ ದಿವಾನರ ಆಡಳಿತ ಪ್ರಾರಂಭವಾಗುತ್ತದೆ. ಅವರಲ್ಲಿ ಒಬ್ಬರಾದ ಪಾಮಾಣಿಕತೆಗೆ ಹೆಸರಾದವರಲ್ಲಿ ಶೇಷಾದ್ರಿ ಅಯ್ಯರ್ ಒಬ್ಬರಾಗಿದ್ದಾರೆ.

ಶೇಷಾದ್ರಿ ಅಯ್ಯರ್ ರವರು 'ಶೇಷಾದ್ರಿ ಅಯ್ಯರ್' ಮನೆತನದ ಮೂರನೆ ತಲೆಮಾರಿನವರು. ಇವರ ಮನೆತನದ ಹಿರಿಯರಾದ ಗೌರಿ ಶೇಷಾದ್ರಿ ಅಯ್ಯರ್‌ರವರು 1784 ರಲ್ಲಿ ಮದ್ರಾಸ್ ರಾಜ್ಯದ ತಂಜಾವೂರನ್ನು ಬಿಟ್ಟು ಕೇರಳದ ಕುಮಾರಪಟ್ಟಂ ಎಂಬ ಹಳ್ಳಿಯಲ್ಲಿ ನೆಲೆಸಿದರು. ಶೇಷಾದ್ರಿ ಅಯ್ಯರ್‌ರವರ ತಂದೆ, ಅನಂತ ಕೃಷ್ಣ ಅಯ್ಯರ್ ಕಲ್ಲಿಕೋಟೆಯ ಕುಮಾರಪುರಂನಲ್ಲಿ ವಕೀಲರಾಗಿದ್ದರು. ಅವರು 1826 ರಲ್ಲಿ, ಅನಂತ ನಾರಾಯಣಿಯವರನ್ನು ಮದುವೆಯಾದರು. ಆದರೆ ಮೊದಲನೆಯ ಪತ್ನಿ ನಿಧನರಾದಾಗ, ವೆಂಕಟಲಕ್ಷ್ಮಿ ಎಂಬುವವರನ್ನು ಎರಡನೆ ವಿವಾಹ ಮಾಡಿಕೊಂಡರು. ಈ ದಂಪತಿಗಳಿಗೆ 1, ಜೂನ್ 1845 ನಲ್ಲಿ ಜನಿಸಿದ ಮಗನೇ ಶೇಷಾದ್ರಿ ಅಯ್ಯರ್.

## ವಿದ್ಯಾಭ್ಯಾಸ

ಶೇಷಾದ್ರಿ ಅಯ್ಯರ್‌ರವರು 'ಕ್ಯಾಲಿಕಟ್'ನಲ್ಲಿ ಪ್ರಾರಂಭಿಕ ವಿದ್ಯಾಭ್ಯಾಸ ಮಾಡಿದರು ನಂತರ, 1866ರಲ್ಲಿ ಮದರಾಸ್‌ನ ಪ್ರೆಸಿಡೆನ್ಸಿ ಕಾಲೇಜ್‌ನಿಂದ ಪದವಿಗಳಿಸಿದರು. ರಾಜ್ಯಕ್ಕೆ ಮೊದಲನೆಯವನಾಗಿ

[1] *ಸಂಶೋಧಕರು, ಮಾನವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.*

ಉತ್ತೀರ್ಣರಾದರು. 1874 ರಲ್ಲಿ ಮದರಾಸ್ ವಿವಿ ಯಿಂದ 'ಬಿ.ಎಲ್ ಪದವಿ' ಗಳಿಸಿದರುಮದರಾಸ್‌ನಲ್ಲಿ ಕೆಲಸಮಾಡುತ್ತಿರುವಾಗಲೇ 'ರಂಗಾಚಾರ್ಲು'ರವರಿಗೆ ಪರಿಚಿತರಾದರು. 1868 ರಲ್ಲಿ ಮೈಸೂರ್ ಸಾಮ್ರಾಜ್ಯದ ಕಾರ್ಯಕಲಾಪಗಳನ್ನು ನೋಡಿಕೊಳ್ಳಲು 'ರಂಗಾಚಾರ್ಲು' ಶೇಷಾದ್ರಿ ಅಯ್ಯರ್ ರವರನ್ನು ಮೈಸೂರಿಗೆ ಕರೆಸಿಕೊಂಡರು.

**ರಂಗಾಚಾರ್ಲುರವರ ಆಪ್ತ ಸಹಾಯಕರಾಗಿ**

1868 ರಲ್ಲಿ ಮೈಸೂರು ಅರಸೊತ್ತಿಗೆಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಆಗಿ ನಿಯುಕ್ತರಾದರು. ಆಗಿನ ದಿವಾನ 'ರಂಗಾಚಾರ್ಲು'ರವರ ಆಪ್ತರಾಗಿ ಕೆಲಸಮಾಡಿದ ನಂತರ ಅವರು ನಿವೃತ್ತರಾದನಂತರ ಅಯ್ಯರ್ ರವರಿಗೆ ದಿವಾನಗಿರಿಯನ್ನು ಕೊಡಲಾಯಿತು. 18 ವರ್ಷ (1883–1901 ರವರೆಗೆ) ಅತಿ ಹೆಚ್ಚುಕಾಲ ರಾಜಸೇವೆಯನ್ನು ಮಾಡಿದ ಹೆಗ್ಗಳಿಕೆಯನ್ನು ಗಳಿಸಿದರು.

**ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಶೇಷಾದ್ರಿ ಅಯ್ಯರ್‌ರವರು ಕೈಗೊಂಡ ಕ್ರಮಗಳು**

ಕೆ. ಶೇಷಾದ್ರಿ ಅಯ್ಯರ್ ಅವರು 1868ರಲ್ಲೇ ಮೈಸೂರಿನ ರಾಜ್ಯದ ಸೇವೆಗೆ ಸೇರಿದ್ದರು. ರಾಜ್ಯದ ಹಣಕಾಸಿನ ಸ್ಥಿತಿಯನ್ನು ಉತ್ತಮಪಡಿಸುವುದೇ ಅವರಿಗೆ ಮುಖ್ಯ ಕರ್ತವ್ಯವಾಯಿತು. ದಿವಾನರಾದಾಗ ಸಂಸ್ಥಾನಕ್ಕೆ ಹೆಚ್ಚಿನ ಆದಾಯ ಬರಬಹುದಾಗಿದ್ದ ಬೆಂಗಳೂರು ದಂಡಿನ ಪ್ರದೇಶದ ಅಧಿಕ ಆದಾಯವನ್ನು ಮೈಸೂರು ಸರಕಾರಕ್ಕೆ ಕೊಡಬೇಕೆಂದು ವಸಾಹತುಶಾಹಿಗಳನ್ನು ಅವರು ಒತ್ತಾಯ ಮಾಡಿದರು. ಹತ್ತು ಲಕ್ಷ ಐವತ್ತು ಸಾವಿರ ಹೆಚ್ಚು ಮಾಡಲಾಗಿದ್ದ ಪೊಗದಿ ಹಣವನ್ನು 1866ರವರೆಗೆ ಮನ್ನ ಮಾಡಿಸಿದರು. ಆದರೆ, ಅವರು 1896ರ ವರೆಗೂ ಅದನ್ನು ಮನ್ನ ಮಾಡಬೇಕೆಂದು ವಾದಿಸಿದ್ದರು. 1884ರಲ್ಲಿ ಬೆಂಗಳೂರಿನಿಂದ ಗುಬ್ಬಿಯವರೆಗೂ, 1889ರಲ್ಲಿ ಹರಿಹರ ಮತ್ತು 1893ರರಲ್ಲಿ ಹಿಂದೂಪುರದವರೆಗೂ ರೈಲುಮಾರ್ಗವನ್ನು ವಿಸ್ತರಿಸಿದರು. 1891ರಲ್ಲಿ ಮೈಸೂರು ನಂಜನಗೂಡು ರೈಲುಮಾರ್ಗವೂ, 1893ರಲ್ಲಿ ಕೋಲಾರ ಚಿನ್ನದ ಗಣಿ (KGF) ರೈಲುಮಾರ್ಗವೂ ನಿರ್ಮಾಣವಾದವು. ಅರಣ್ಯದ ಆದಾಯವನ್ನು ಹೆಚ್ಚಿಸಲು ವಿಶಾಲವಾದ ಕಾಡುಗಳನ್ನು ಬೆಳೆಸಲಾಯಿತು. ಚಿನ್ನದ ಗಣಿ ಉದ್ಯಮದ ಮೇಲೆ ಹಾಕಿದ ಶೇ.5 ರಷ್ಟು ರಾಷ್ಟ್ರೀಯ ಆದಾಯಕ್ಕಾಗಿ 1886–87ರ ಸಾಲಿನಲ್ಲಿ ಪ್ರಥಮ ಬಾರಿಗೇ ರೂ.47,000 ಸರಕಾರಕ್ಕೆ ವರಮಾನ ಬರುವಂತಾಯಿತು. 1884ರಿಂದ ಮೈಸೂರಿನ ನ್ಯಾಯಾಲಯಕ್ಕೆ ಹೆಚ್ಚು ನ್ಯಾಯಾಧೀಶರನ್ನು ನೇಮಿಸಲಾಗಿತ್ತು. ಅದೇ ವರ್ಷ ತಾಲೂಕು ಮಂಡಲಿಗಳು ಸ್ಥಾಪಿತವಾದವು. ಹಳೆಯ ಕಾಲದ ಅಂಚೆ ಪದ್ಧತಿಯನ್ನು 1889ರಲ್ಲಿ ವಸಾಹತುಶಾಹಿಗಳ ಅಂಚೆ ಪದ್ಧತಿಗೆ ಸೇರಿಸಲಾಯಿತು. ಆಡಳಿತ ಸೇವೆಯನ್ನು ಸಮರ್ಥವಾಗಿ 1891ರಲ್ಲಿ ಮೈಸೂರ್ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಆರಂಭಿಸಲಾಯಿತು. ಅದು ಭಾರತದ ಎಲ್ಲ ಪ್ರಜೆಗಳಿಗೂ ಅನ್ವಯಿಸಿತ್ತು. ಆದರೆ ಇದು ಮೈಸೂರಿನ ಪ್ರಜಾಪ್ರತಿನಿಧಿಯ ಸಭೆಯಲ್ಲಿ

ವಿರೋಧಕ್ಕೆ ಗುರಿಯಾಯಿತು. ಮೈಸೂರಿನ ಸಾರ್ವಜನಿಕ ಜೀವನದಲ್ಲಿಯೂ ವೃತ್ತಿ ಪತ್ರಿಕೋದ್ಯಮದಲ್ಲಿಯೂ ಪ್ರತಿಷ್ಠಿತರಾಗಿ, ಪಿತಾಮಹ ಎಂದು ಹೆಸರಾಂಕಿತ ಎಂ. ವೆಂಕಟಕೃಷ್ಣಯ್ಯನವರ ನೇತೃತ್ವದಲ್ಲಿ ಹಲವಾರು ಸದಸ್ಯರು ಇದನ್ನು ವಿರೋಧಿಸಿದರು. ಅವರ ವಾದಗಳು ಸ್ಥಳೀಯ ಪ್ರತಿಭಾವಂತರಿಗೆ ರಕ್ಷಣೆ ನೀಡಬೇಕೆಂಬ ಉದ್ಧೇಶದಿಂದ ಕೂಡಿದ್ದವು ಎಂದು ಸಮಕಾಲೀನ ಚರಿತ್ರೆಕಾರರು ತಿಳಿಸುತ್ತಾರೆ. ಈ ದೃಷ್ಟಿಯಿಂದ ದಿವಾನರ ಅನೇಕ ಕಾರ್ಯಧೋರಣೆಗಳು ಟೀಕೆಗೆ ಗುರಿಯಾದವು.

ಶೇಷಾದ್ರಿ ಅಯ್ಯರ್ ದಿವಾನರಾಗಿದ್ದ ಕಾಲದ ಮೈಸೂರಿನ ರಾಜಕೀಯವನ್ನು ಮೈಸೂರಿನ ಬ್ರಾಹ್ಮಣರು ಮತ್ತು ಮೈಸೂರಿಗೆ ಹೊರಗಿನಿಂದ ಬಂದ ಬ್ರಾಹ್ಮಣರೊಂದಿಗೆ ನಡೆದ ಹೋರಾಟವೆನ್ನಬಹುದು. ಅದೇ ವರ್ಷ ಸರಕಾರಿ ನೌಕರರ ಅನುಕೂಲಕ್ಕಾಗಿ ಜೀವವಿಮಾ ಪದ್ಧತಿ ಆಚರಣೆಗೆ ಬಂದಿತು. ನೀರಾವರಿ ಅಭಿವೃದ್ದಿ ಹಾಗೂ ವ್ಯವಸಾಯಕ್ಕೆ ಹೆಚ್ಚಿನ ಗಮನ ನೀಡಲಾಯಿತು. ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕಿನಲ್ಲಿರುವ ಮಾರಿಕಣಿವೆ ಯೋಜನೆ ನಿರ್ಮಾಣ ಮಾಡಲಾಯಿತು. 1886ರಲ್ಲಿ ದೇಶದಲ್ಲಿಯೇ ಪ್ರಥಮ ಬಾರಿಗೆ, ಮೈಸೂರು ನಗರದಲ್ಲಿ ಜಾವಾ ಬೈಕ್ ಕೈಗಾರಿಕೆ ನಿರ್ಮಾಣಗೊಂಡಿತ್ತು ಮತ್ತು ಕೃಷಿ ವಸ್ತುಗಳ ಪ್ರದರ್ಶನ ನಡೆಯಿತು. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಗಮನ ಕೊಡಲಾಯಿತು. ಆಗ ಆರಂಭವಾದ ಮಹಾರಾಣಿ ಬಾಲಿಕಾ ಪ್ರೌಢಶಾಲೆ, ನಂತರ 1901ರಲ್ಲಿ ಮಹಾರಾಣಿ ಕಾಲೇಜಾಗಿ ಬೆಳೆಯಿತು. 1890ರಲ್ಲಿ ಬಿ.ಎಲ್.ರೈಸ್ ಅವರ ಮುಖಂಡತ್ವದಲ್ಲಿ ಆರಂಭವಾದ ಶಾಸನ ಇಲಾಖೆ ರಾಜ್ಯದಲ್ಲಿ ದೊರಕಿದ ಶಿಲಾಶಾಸನಗಳನ್ನು ಶೇಖರಿಸಿ ಪ್ರಕಟಿಸುವ ಬಗೆಗೆ ಒಂದು ಬಹು ಮುಖ್ಯ ಹೆಜ್ಜೆ ಇಡಲಾರಂಭಿಸಿದ್ದು ಶೇಷಾದ್ರಿ ಅವರ ಕಾಲದಲ್ಲಿಯೇ. ಅದೇ ವರ್ಷ ಮೈಸೂರಿನಲ್ಲಿ ಪ್ರಾಚ್ಯಪುಸ್ತಕಗಳ ಭಂಡಾರ ಆರಂಭವಾಗಿ ಅಮೂಲ್ಯ ಹಸ್ತಪ್ರತಿಗಳ ಸಂಗ್ರಹದ ಕಾರ್ಯವೂ ಮುಂದುವರೆಯಿತು. ಚಾಮರಾಜ ಒಡೆಯರ್ ಅವರು ಕನ್ನಡ ಮತ್ತು ಸಂಸ್ಕೃತಿಗಳ ಪ್ರೇಮಿಯಾಗಿದ್ದರು. ಅವರು ವಿದ್ವಾಂಸರಿಗೆ ಹೆಚ್ಚಿನ ಆಶ್ರಯ ನೀಡಿದರು. 10ನೇ ಚಾಮರಾಜ ಒಡೆಯರು ಕಂಠರೋಗಕ್ಕೆ ತುತ್ತಾಗಿ 1894ರಲ್ಲಿ ತಮ್ಮ 32ನೇ ವಯಸ್ಸಿನಲ್ಲಿ ಕಲ್ಕತ್ತಾದಲ್ಲಿ ಮರಣ ಹೊಂದಿದರು. ನಂತರ ಅಧಿಕಾರಕ್ಕೆ ಬಂದ ರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಆಗ ಹತ್ತು ವರ್ಷ ವಯಸ್ಸಾಗಿತ್ತು.

ನಾಲ್ವಡಿ ಕೃಷ್ಣರಾಜರು ಪ್ರಾಪ್ತವಯಸ್ಸಿಗೆ ಬರುವವರೆಗೂ ಅವರ ತಾಯಿ ವಾಣಿವಿಲಾಸ ಸನ್ನಿಧಾನ ಎಂದು ಹೆಸರಾಗಿದ್ದ ಕೆಂಪರಾಜಮ್ಮಣ್ಣಿಯವರು ರಾಜ ಪ್ರತಿನಿಧಿಯಾಗಿ ದಿವಾನರು ಮತ್ತು ಸಲಹಾ ಸಮಿತಿ ಸದಸ್ಯರ ನೆರವಿನಿಂದ ರಾಜ್ಯಭಾರ ಮಾಡಿದರು. ಅವರ ರಾಜಪ್ರತಿನಿಧಿತ್ವದ ಕಾಲದಲ್ಲಿ ಕೈಗೊಂಡ ಗಮನಾರ್ಹ ಕಾರ್ಯಗಳಲ್ಲಿ ಭೂಗರ್ಭ ಶೋಧನೆಯ ಇಲಾಖೆಯನ್ನು 1894ರಲ್ಲಿ ಸ್ಥಾಪಿಸಿದುದು ಮುಖ್ಯವಾದುದು. ಈ ಇಲಾಖೆ ರಾಜ್ಯದ ಖನಿಜ ಸಂಪನ್ಮೂಲಗಳನ್ನು

ಹೊರತೆಗೆಯುವ ಸಾಧ್ಯತೆಗಳ ಬಗೆಗೆ ವ್ಯವಸ್ಥಿತವಾದ ಪರಿಶೀಲನೆ ನಡೆಸಿತು ಹಾಗೆಯೇ ಕೃಷಿ ಇಲಾಖೆಯೂ ಆರಂಭವಾಯಿತು. ಲೋಕೋಪಯೀಗಿ ಕಾರ್ಯಗಳಿಗೆ ವಿಶೇಷ ಗಮನ ನೀಡಲಾಯಿತು. 1988ರಲ್ಲಿ ಬೀರೂರು–ಶಿವಮೊಗ್ಗ ರೈಲುಮಾರ್ಗ ಆರಂಭವಾಯಿತು. 1897–98ರಲ್ಲಿ ರಾಜ್ಯದಲ್ಲೆಲ್ಲ ಪ್ರಧಾನವಾಗಿ ಬೆಂಗಳೂರು ನಗರದಲ್ಲಿ ಪ್ಲೇಗಿನ ಪೀಡೆಯಿಂದ ಹೆಚ್ಚಿನ ಜನ ಮರಣಹೊಂದಿದರು. ಈ ರೋಗದಿಂದ ಜನರು ಪ್ರತ್ಯೇಕವಾಗಿ ವಾಸಿಸುವುದಕ್ಕೆ ಅನುಕೂಲ ಮಾಡಲು ಬೆಂಗಳೂರಿನಲ್ಲಿ ಹೊಸದಾಗಿ ಮಲ್ಲೇಶ್ವರಂ ಮತ್ತು ಬಸವನಗುಡಿ ಬಡಾವಣೆಗಳು ನಿರ್ಮಾಣಗೊಂಡವು. ಆದರೆ ಮುಖ್ಯವಾದ ವಿಷಯವೆಂದರೆ ಶಿವನಸಮುದ್ರದಲ್ಲಿ ಕಾವೇರಿ ಜಲಪಾತವನ್ನು ಉಪಯೋಗಿಸಿಕೊಂಡು ಜಲವಿದ್ಯುತ್ ಕೇಂದ್ರದಿಂದ ಕೋಲಾರ ಚಿನ್ನದ ಗಣಿಗೂ, ಅನಂತರ 1905ರಲ್ಲಿ ಬೆಂಗಳೂರು ನಗರಕ್ಕೆ ವಿದ್ಯುತ್ ಸರಬರಾಜು ಮಾಡುವ ಕಾರ್ಯ ಆರಂಭಿಸಲಾದದ್ದು. ಭಾರತದಲ್ಲಿ ವಿದ್ಯುತ್ ಪಡೆದ ನಗರಗಳಲ್ಲಿ ಬೆಂಗಳೂರು ಮೊದಲನೆಯದಾಯಿತು. ಅಂದಿಗೆ ಇದು ಭಾರತದಲ್ಲೇ ಅತ್ಯಂತ ಉದ್ದವಾದ ಪ್ರಥಮ ವಿದ್ಯುದ್ವಾಹಕ ಸರಣಿಯಾಗಿತ್ತು ಹಾಗೂ ಮಹತ್ವದ ಸಾಧನೆಯಾಗಿತ್ತು

ಮೈಸೂರು ಸಂಸ್ಥಾನದ ನಗರ ಮತ್ತು ಹಲವು ಗ್ರಾಮಗಳಲ್ಲಿ ಬೀದಿ ಮತ್ತು ಮನೆಗಳಲ್ಲಿ ಬೆಳಗುತ್ತಿದ್ದ ವಿದ್ಯುತ್ ದೀಪಗಳನ್ನು ಕಾರ್ಖಾನೆಗಳಲ್ಲಿ ಬೃಹದಾಕಾರದ ಯಂತ್ರಗಳನ್ನು ನೋಡಿದೊಡನೆಯೇ ಇವುಗಳಿಗೆಲ್ಲ ಮೂಲಾರ್ಥ ವಿದ್ಯುಚ್ಛಕ್ತಿ ಎಂಬುದು ತಿಳಿದುಬರುತ್ತದೆ. ಶೇಷಾದ್ರಿ ಅಯ್ಯರ್ ಅವರ ದೂರದೃಷ್ಟಿಯ ಫಲ ಇದರಿಂದ ಎದ್ದು ಕಾಣುತ್ತದೆ. ಪ್ರಜಾಪ್ರತಿನಿಧಿ ಸಭೆಯು ಸಂಸ್ಥಾನದಲ್ಲಿ ಹೆಚ್ಚಿನ ಪ್ರಾಮಾಣಿಕತೆಗಳಲ್ಲಿಯೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿತು. ಆರಂಭದ ವರ್ಷಗಳಲ್ಲಿ ಅದು ಗೌರವಾನ್ವಿತ ಮನವಿದಾರರ ಕೂಟವಾಗಿತ್ತು ಎನ್ನಬಹುದು. 1897ರ ಹೊತ್ತಿಗೆ ಸದಸ್ಯರ ಹೆಸರುಗಳು ಸರಕಾರಿ ದಾಖಲೆಗಳಲ್ಲಿ ಸೇರಿಕೊಂಡು ಅವರ ಸ್ಥಾನಮಾನಗಳು ಮನ್ನಣೆಗೆ ಪಾತ್ರವಾಗಿದ್ದವು. 1891ರಲ್ಲಿ ಚುನಾವಣೆಯ ಪದ್ಧತಿ ಜಾರಿಗೆ ಬಂದಿತು. ಹೆಚ್ಚು ಆಸ್ತಿ ಹಾಗೂ ಸರ್ಕಾರಕ್ಕೆ ಹೆಚ್ಚಿನ ಲೇವಿ ಪಾವತಿಸುವವರು ಮತದಾನಕ್ಕೆ ಅರ್ಹತೆ ಪಡೆದಿದ್ದರು. ಪದವೀಧರರೂ ಮತ ನೀಡುವ ಹಕ್ಕನ್ನು ಹೊಂದಿದ್ದರು. ಇದು ಬ್ರಿಟಿಷ್ ಪ್ರಾಂತ್ಯಗಳಲ್ಲಿ ನ್ಯಾಯವಿಧೇಯಕ ಸಭೆಗಳು ಸ್ಥಾಪನೆಯಾಗುವುದಕ್ಕೆ ಒಂದು ವರ್ಷ ಮುಂಚೆಯೇ ನಡೆದಿತ್ತು. 1894ರಲ್ಲಿ ಸದಸ್ಯರ ಅವಧಿ ಮೂರು ವರ್ಷಗಳೆಂದು ನಿರ್ಧಾರವಾಯಿತು. ಇದರಿಂದ ಪ್ರಜಾಪ್ರತಿನಿಧಿಗಳೆನಿಸಿಕೊಂಡವರು ತಮ್ಮ ಕಾರ್ಯವನ್ನು ಹೆಚ್ಚು ಶ್ರದ್ಧೆಯಿಂದ ನಿರ್ವಹಿಸಲು ಕಾರಣವಾಯಿತು.

1898 ರಲ್ಲಿ ಕೃಷಿ ಮತ್ತು ಸಂಖ್ಯಾಶಾಸ್ತ್ರ ಇಲಾಖೆಯನ್ನು ಸ್ಥಾಪಿಸಿದರು. ಕೃಷಿಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಬಯಸಿದ ವಿದ್ಯಾರ್ಥಿಗಳನ್ನು ಶಿಷ್ಯವೇತನದೊಂದಿಗೆ ಮದ್ರಾಸಿಗೆ ಕಳುಹಿಸಿದರು. ಭಾರತದಲ್ಲೇ ಪ್ರಥಮ ಬಾರಿಗೆ 1886 ರಲ್ಲಿ ಕೃಷಿ ಮತ್ತು ಕೈಗಾರಿಕಾ ವಸ್ತುಪ್ರದರ್ಶನವನ್ನು

ಮೈಸೂರಿನಲ್ಲಿ ಏರ್ಪಡಿಸಿದರು. ಕಾಫಿ ಅರಣ್ಯಗಳ ಅಭಿವೃದ್ಧಿಗೆ ಪರಿಹಾರ ಧನವನ್ನು ಕೊಟ್ಟರು. ರೈತರಿಗೆ ಸಾಲ ಕೊಡಲು 1894 ರಲ್ಲಿ ಕೃಷಿ ಬ್ಯಾಂಕನ್ನು ತೆರೆದರು. ಭೂ ತಂಟೆಗಳ ನಿವಾರಣೆಗೆ ಲ್ಯಾಂಡ್ ರೆವಿನ್ಯೂ ಟ್ರಿಬ್ಯುನಲ್ ಅನ್ನು ಸ್ಥಾಪಿಸಿದರು. ಶಾನಭೋಗ ಮತ್ತು ಪಟೇಲರಿಗೆ ಅಂತಸ್ಥನ್ನು ಉತ್ತಮಪಡಿಸಲು ಉಚಿತ ಭೂಮಿಯನ್ನು ಕೊಟ್ಟರು. ಭೂಕಂದಾಯ ಸಂಹಿತೆ ಜಾರಿಮಾಡಿ ಭೂ ಒಡೆತನ, ಜಮೀನ್ದಾರಿಕೆ, ಹಿಡುವಳಿ ಇತ್ಯಾದಿಗಳ ಬಗ್ಗೆ ಆದೇಶವನ್ನು ಜಾರಿಮಾಡಿದರು. ಮೈಸೂರಿನ ಚಾಮರಾಜೇಂದ್ರ ಮೃಗಾಲಯವನ್ನು 45 ಎಕರೆಗಳಲ್ಲಿ ಸ್ಥಾಪಿಸಲಾಯಿತು. ಈಗ ಇದು 250 ಎಕರೆ ಇದೆ. ಬೆಂಕಿಯಿಂದ ನಾಶವಾಗಿದ್ದ ಮೈಸೂರು ಅರಮನೆಯ ನಿರ್ಮಾಣ ಕಾರ್ಯವನ್ನು ಪುನರ್ ಆರಂಭಿಸಿದರು.

ಶೇಷಾದ್ರಿ ಅವರ ಕಾಲದಲ್ಲಿ ರಾಜ್ಯಗಳ ಶಾಲೆಗಳು 1797 ಕ್ಕೆ ಹೆಚ್ಚಿದವು. ಅವುಗಳಲ್ಲಿ ಶೇಷದ್ರಿಯವರು 800 ಪ್ರಾಥಮಿಕಶಾಲೆ, 50 ಮಾಧ್ಯಮಿಕಶಾಲೆ, 30 ಸಂಸ್ಕೃತಶಾಲೆ, 4 ಕೈಗಾರಿಕಾ ಶಾಲೆ, 3 ಓರಿಯೆಂಟಲ್ ಕಾಲೇಜುಗಳು ಮತ್ತು 1 ಡಿಗ್ರಿ ಕಾಲೇಜನ್ನು ಸ್ಥಾಪಿಸಿದರು. ಅವರು ಹರಿಜನರಿಗೆ ಶಾಲೆಯನ್ನು ತೆರೆದರು. ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಕೊಟ್ಟರು. ಅವರು ಮೈಸೂರು ಮಹಾರಾಣಿ ಪ್ರೌಢಶಾಲೆ ತೆರೆದು ಅದನ್ನು ಕಿರಿಯಶಾಲೆಯಾಗಿ ಪರಿವರ್ತಿಸಿದರು. ಮೈಸೂರು ಮಹಾರಾಜ ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜನ್ನು ಡಿಗ್ರಿ ಕಾಲೇಜುಗಳಾಗಿ ಪರಿವರ್ತಿಸಿದರು. ಮತ್ತು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಕಲೆಯ ಜೊತೆಗೆ ವಿಜ್ಞಾನ ವಿಭಾಗಗಳನ್ನು ಆರಂಬಿಸಿದರು. 1897ರ ವಿಕ್ಟೋರಿಯಾ ರಾಣಿಯ ವಜ್ರ ಮಹೋತ್ಸವದ ಜ್ಞಾಪಕಾರ್ಥ ತುಮಕೂರಿನ ಎಂ.ಪ್ರೆಸ್ ಗರ್ಲ್ಸ್ ಹೈಸ್ಕೂಲ್ ಬೆಂಗಳೂರಿನ ಆರ್ಯ ಬಾಲಿಕ ಪ್ರೌಢಶಾಲೆಗಳನ್ನು ತೆರೆದರು. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸಲು 1887ರಲ್ಲಿ ಮಹಿಳಾ ಬೋದಕರನ್ನು ರೂಪಿಸಲು ತರಬೇತಿ ಶಾಲೆಗಳನ್ನು ತೆರೆದರು. 1894ರ ವೇಳೆಗೆ ಮೈಸೂರು ಸಂಸ್ಥಾನದಲ್ಲಿ 140 ಬಾಲಕಿಯರ ಶಾಲೆಗಳಿದ್ದವು. ಇದೇ ಸಂದರ್ಭದಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯನ್ನು ತೆರೆದರು. 1889 ರಲ್ಲಿ ಲಾಲ್‌ಬಾಗ್ ನ ಗ್ಲಾಸ್‌ಹೈಸ್ ಕಟ್ಟಡವನ್ನು ಕಟ್ಟಿಸಿದರು. 1901 ರಲ್ಲಿ ಬೆಂಗಳೂರಿನಲ್ಲಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಕಟ್ಟುವ ಕೆಲಸ ಪ್ರಾರಂಭವಾಗಿ 1911 ರಲ್ಲಿ ಪೂರ್ಣಗೊಂಡಿತು.

ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳ ಪುನರುತ್ಥಾನಕ್ಕಾಗಿ 1887ರಲ್ಲಿ ಕರ್ನಾಟಕ ಭಾಷೋಜೀವಿನಿ ಸಭಾವನ್ನು ಸ್ಥಾಪಿಸಿದರು. ಇವರ ಆಶ್ರಯದಲ್ಲಿ ಭವಭೂತಿಯ ಉತ್ತರ ರಾಮಚರಿತ್ರೆ, ಶೂದ್ರಕನ ಮೃಚ್ಛಕಟಿಕ ಹರ್ಷನ ರತ್ನಾವಳಿ, ಶೇಕ್ಸ್‌ಪಿಯರ್‌ನ ಓಥೆಲೋ ಇಂಗ್ಲೀಷ್ ನಾಟಕಗಳು ಕನ್ನಡಕ್ಕೆ ಅನವಾದಿಸಲ್ಪಟ್ಟವು. ಟಿಪ್ಪು ಕಾಲದಿಂದ ನಿಂತು ಹೋಗಿದ್ದ ಮೈಸೂರು ದಸರಾ ಹಬ್ಬದ ಆಚರಣೆಯನ್ನು ಪುನ: ಆರಂಭಿಸಿದರು.

ದಿವಾನರು 1894 ರಲ್ಲಿ ಮೈಸೂರು ಬಾಲ್ಯವಿವಾಹ ನಿಷೇಧ ಕಾಯಿದೆಯನ್ನು ಜಾರಿ ಮಡಿ, 8 ವರ್ಷ ಕೆಳಗಿನ ಹೆಣ್ಣುಮಕ್ಕಳ ವಿವಾಹವನ್ನು ನಿಷೇದಿಸಿದರು. ಈ ಕಾಯಿದೆಯು ಭಾರತದ ಉದಾರವಾದಿಗಳ ಮೆಚ್ಚುಗೆ ಪಡೆದು ಅದನ್ನು ಬ್ರಿಟಿಷ್ ಭಾರತಕ್ಕೂ ವಿಸ್ತರಿಸಬೇಕೆಂದು ಬಯಸಿದರು. ಇದೇ ವೇಳೆ ವೀರೇಶಲಿಂಗ ಪಂತಲು ರವರು ವಿಧವಾ ವಿವಾಹ ಪರ ಹೋರಾಡಿ ಎಲ್ಲರ ಗಮನ ಸೆಳೆದರು. ದಿವಾನರ ಕಾಲದಲ್ಲಿ ಮೈಸೂರಿಗೆ ಬಂದಿದ್ದ ಸ್ವಾಮಿ ವಿವೇಕಾನಂದರಿಗೆ ಮಹಾರಾಜರು ಕೊಟ್ಟ ನೆರವಿನಿಂದ 1893 ರ ಅಮೇರಕಾದ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಭಾಗಿಯಾದರು. ವಿವೇಕಾನಂದರು ಒಡೆಯರ ಸಹಾಯವನ್ನು ಕೃತಜ್ಞತೆಯಿಂದ ಸ್ಮರಿಸಿ ಅವರ ಈ ಕಾರಣಕ್ಕಾಗಿ ಮೈಸೂರನ್ನು ಸಾಮಾಜಿಕ ಸುಧಾರಣಾ ಉಜ್ವಲ ನಕ್ಷತ್ರವೆಂದು ಹೊಗಳಿದರು.

ಶೇಷಾದ್ರಿ ಅಯ್ಯರ್ ಅವರ ಸುಧೀರ್ಘ ಹದಿನೆಂಟು ವರ್ಷಗಳ ಕಾಲದ ದಿವಾನ್ ಪದವಿಯ ಅವಧಿಯಲ್ಲಿ ಮೊದಲ ಹನ್ನೊಂದು ವರ್ಷಗಳ ಕಾಲ ಚಾಮರಾಜೇಂದ್ರ ಒಡೆಯರ್ ಅವರು ರಾಜರಾಗಿದ್ದರೆ, ನಂತರ ರೀಜೆಂಟರಾದ ವಾಣಿವಿಲಾಸ ಅವರ ಬೆಂಬಲ ಇವರಿಗೆ ದೊರಕಿತ್ತು. ಶೇಷಾದ್ರಿ ಅಯ್ಯರ್ ಅವರು ದಿವಾನ್ ಪದವಿಗೆ ಬಂದ ಮೊದಲನೆಯ ಮೂರು ವರ್ಷಗಳ ಕಾಲ ದೇಶದ ಆರ್ಥಿಕ ಸ್ಥಿತಿಯು ಅಸಮರ್ಪಕವಾಗಿಯೇ ಇತ್ತು. ವರಮಾನ ಅತ್ಯಂತ ಕಡಿಮೆಯಾಗಿತ್ತು. ಅಭಿವೃದ್ಧಿ ಪರ ಕೆಲಸಗಳಾದ ರೈಲು ಹಳಿಗಳ ನಿರ್ಮಾಣ, ನೀರಾವರಿ, ಕೃಷಿ ಕೈಗಾರಿಕೆಗಳ ಪ್ರಗತಿಗೆ ತಗಲುವ ವೆಚ್ಚವು ಹೆಚ್ಚಾಗಿತ್ತು. ಇದರ ನಡುವೆ 1884ರಲ್ಲಿ ಸಂಸ್ಥಾನದ ಕೆಲವು ಪ್ರದೇಶಗಳಲ್ಲಿ ಸಂಭವಿಸಿದ ಕ್ಷಾಮವು ಆರ್ಥಿಕ ಪರಿಸ್ಥಿತಿಯ ಮೇಲೆ ಗಂಭೀರ ಪರಿಣಾಮವನ್ನುಂಟುಮಾಡಿತು. ಇದರಿಂದ ಇವರು ಅಧಿಕಾರಕ್ಕೆ ಬಂದ ಪ್ರಾರಂಭದಲ್ಲಿಯೇ ನಿರುತ್ಸಾಹಕವಾದ ವಾತಾವರಣ ನಿರ್ಮಾಣವಾಗುತ್ತದೆಂಬುದು ವ್ಯಕ್ತವಾಗುತ್ತದೆ. ಧೃತಿಗೆಡದ ಐಯ್ಯರ್ ತಮ್ಮ ರಾಜತಾಂತ್ರಿಕತೆಯಿಂದ ದೇಶದಲ್ಲಿ ಉಂಟಾಗಿದ್ದ ಕ್ಷಾಮದ ನಿವಾರಣೆಗೆ ಶ್ರಮಿಸಿದರು. 1886ರಲ್ಲಿ ಸಂಸ್ಥಾನದ ಆಯವ್ಯಯವು ಹದಿಮೂರು ಲಕ್ಷ ರೂಪಾಯಿಗಳ ಉಳಿತಾಯವನ್ನು ತೋರಿಸುವ ರೀತಿಯಲ್ಲಿ ಮುನ್ನಡೆಯಿತು. ಕ್ಷಾಮದಿಂದ ಉಂಟಾಗಿದ್ದ ಆರ್ಥಿಕ ನಷ್ಟವನ್ನು ಉತ್ತಮ ಪಡಿಸಲು ಹಾಗೂ ಜನರಿಗೆ ಉದ್ಯೋಗ ಸೃಷ್ಟಿಸಲು ಕೆರೆಗಳ ನಿರ್ಮಾಣ ಹಾಗೂ ರೈಲು ಮಾರ್ಗಗಳನ್ನು ಹೊಸದಾಗಿ ನಿರ್ಮಿಸುವ ಕೆಲಸಗಳನ್ನು ಕೈಗೊಂಡು ಗ್ರಾಮೀಣ ಪ್ರದೇಶದ ಜನರಿಗೆ ಕೆಲಸ (ಕೂಲಿ) ಸಿಗುವಂತೆ ಮಾಡಿದರು. ತೆರಿಗೆ ಪ್ರಮಾಣವನ್ನು ಕಡಿಮೆ ಮಾಡಿದರು. ನಾಲ್ವಡಿ ಅವರ ಆದೇಶದಂತೆ ಶೇಷಾದ್ರಿ ಅಯ್ಯರ್ ಅವರು ಕೇಂದ್ರದ ಬ್ರಿಟಿಷ್ ಸರ್ಕಾರಕ್ಕೆ ಪ್ರತಿ ವರ್ಷ ಹತ್ತೂವರೆ ಲಕ್ಷ ರೂಪಾಯಿಗಳ ಪೊಗದಿ ಕೊಡುವುದನ್ನು ಮನ್ನ ಮಾಡಬೇಕೆಂದು ಕೋರಿ ಬ್ರಿಟಿಷ್ ಸರ್ಕಾರಕ್ಕೆ ಪತ್ರ ಬರೆದು, ಈ ಕಾರ್ಯದಲ್ಲಿ ಯಶಸ್ವಿಯಾದರು. 1886ರಲ್ಲಿ ಇವರಿಗೆ "Fellow of the Madras University" ಎಂಬ ಗೌರವ ನೀಡಿ ಗೌರವಿಸಲಾಯಿತು. ಬ್ರಿಟಿಷ್ ಸರ್ಕಾರ ಇವರಿಗೆ CSI ಎಂಬ ಬಿರುದನ್ನು

ನೀಡಿ ಗೌರವಿಸಿತ್ತು. ನಂತರ ಇವರು KCSI ಎಂಬ ಬಿರುದಿಗೂ ಭಾಜನರಾದರು. ಹೀಗೆ ಹದಿನೆಂಟು ವರ್ಷಗಳ ಕಾಲ ಮೈಸೂರು ಸಂಸ್ಥಾನದ ದಿವಾನರಾಗಿ ಆಳ್ವಿಕೆ ನಡೆಸಿದ ಐಯ್ಯರ್, 1901 ಮಾರ್ಚ್ 18ರಂದು ದಿವಾನ ಪದವಿಯಿಂದ ನಿವೃತ್ತರಾದರು. 1901 ಸೆಪ್ಟಂಬರ್ 13ರಂದು ಮರಣ ಹೊಂದಿದರು.

**ಉಪಸಂಹಾರ**

ಕೆ. ಶೇಷಾದ್ರಿ ಅಯ್ಯರ್ ಅವರು ದಕ್ಷ ಆಡಳಿತಗಾರರಾಗಿದ್ದು, ತಮ್ಮ ಆಡಳಿತಾವಧಿಯಲ್ಲಿ ಮೈಸೂರು ಸಂಸ್ಥಾನದ ಸರ್ವತೋಮುಖ ಪ್ರಗತಿಗಾಗಿ ಆಡಳಿತ, ಹಣಕಾಸು, ಕೃಷಿ, ಕೈಗಾರಿಕೆ, ಸಾರಿಗೆ, ಸಂಪರ್ಕ, ಶಿಕ್ಷಣ, ನ್ಯಾಯಾಂಗ ಮೊದಲಾದ ಕ್ಷೇತ್ರಗಳಲ್ಲಿ ಹಲವಾರು ಸುಧಾರಣೆಗಳನ್ನು ಜಾರಿಗೆ ತಂದರು. ಅವರು ರೂಪಿಸಿದ ಯೋಜನೆಗಳನ್ನು ಅವರೇ ಪೂರ್ಣಗೊಳಿಸಲು ಹೆಚ್ಚು ಕಾಲ ಆಡಳಿತ ನಡೆಸಿದ್ದು ಸಹಕಾರಿಯಾಯಿತು. ಇವರು 10ನೇ ಚಾಮರಾಜ ಒಡೆಯರು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ 1883 ರಿಂದ 1901ರ ವರೆಗೆ ಮೈಸೂರು ದಿವಾನರಾಗಿದ್ದು, ಇವರ 18 ವರ್ಷಗಳ ಆಳ್ವಿಕೆಯ ಕಾಲದಲ್ಲಿ ಮೈಸೂರು ಸಂಸ್ಥಾನವು ಎಲ್ಲಾ ರಂಗಗಳಲ್ಲೂ ಸರ್ವಾಂಗೀಣ ಪ್ರಗತಿ ಸಾಧಿಸಿ ಮಾದರಿ ಸಂಸ್ಥಾನದತ್ತ ಮುನ್ನಡೆಯಿತು. ಮತ್ತು 'ಆಧುನಿಕ ಮೈಸೂರು ಸಂಸ್ಥಾನದ ನಿರ್ಮಾಪಕ' ಮತ್ತು 'ಮಾದರಿ ಸಂಸ್ಥಾನದ ರೂವಾರಿ' ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಹೀಗಾಗಿ ಮೈಸೂರಿನ ಇತಿಹಾಸದ ಪ್ರತಿ ಭಾಗದಲ್ಲಿ ಇವರ ಆಡಳಿತ ಸುಧಾರಣಾ ಕ್ರಮ ಶಾಶ್ವತವಾಗಿ ಕಂಗೊಳಿಸುತ್ತಿದೆ.

**ಪರಾಮರ್ಶನ ಗ್ರಂಥಗಳು**


- ಕಣಜ. (2015). ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ: ನಾಲ್ಕು ದಿವಾನರುಗಳ ಕಾಲದ ಮೈಸೂರು ರಾಜಕೀಯ (1), ಮಾಹಿತಿಯನ್ನು https://kanaja.karnataka.gov.in ಅಂತರ್ಜಾಲದಿಂದ ಪಡೆಯಲಾಗಿದೆ.
- ನಾಗರಾಜು. ಹೆಚ್ ಎಂ. (2010) ಆಧುನಿಕ ಕರ್ನಾಟಕ ಸಂಕ್ಷಿಪ್ತ ಚರಿತ್ರೆ ಸಪ್ನ ಬುಕ್ ಹೌಸ್, ಬೆಂಗಳೂರು.
- ಸೂರ್ಯನಾಥ ಕಾಮಾತ್. (2005). ಕರ್ನಾಟಕ ಸಂಕ್ಷಿಪ್ತ ಇತಿಹಾಸ. ಎಂ.ಎಸ್. ಪಬ್ಲಿಕೇಷನ್, ಬೆಂಗಳೂರು.
- ಸದಾಶಿವ. ಕೆ. (2013). ಭಾರತದ ಸಮಗ್ರ ಇತಿಹಾಸ, ಸ್ವಪ್ನ ಬುಕ್ ಹೌಸ್, ಮೈಸೂರು.